ಆದರೆ ಇದುವರೆಗೂ ಯಾವುದೇ ಕ್ರಮ ಜರುಗಿಸಿಲ್ಲ. ಹಿಂಗಾರು ಅಥವಾ ಮುಂಗಾರು ನೀರು ಕೊಡುತ್ತಾರೆಯೇ ಎನ್ನುವುದಕ್ಕೆ ಸರ್ಕಾರ ಸ್ಪಷ್ಟ ಪಡಿಸಬೇಕಾಗುತ್ತದೆ. ಅದಕ್ಕೆ total ಆಗಿ 2,000 ಕ್ಯೂಸೆಟ್ ನೀರು ಬೇಕಾಗುತ್ತದೆ. ಆದರೆ ಅಲ್ಲಿ temporary repair ಮಾಡಿದ್ದಾರೆ. ಅಲ್ಲಿ ಕೇವಲ 900 ಕ್ಯೂಸೆಕ್ಸ್ ನೀರು ಬರುತ್ತದೆ. ಅದಕ್ಕೆ ಸರ್ಕಾರ ಹೇಗೆ ಯುದ್ಧೋಪಾದಿಯಲ್ಲಿ ಕೆಲಸ ಮಾಡಿ ಮುಂಗಾರು ಅಥವಾ ಹಿಂಗಾರು ನೀರು ಬಿಡುತ್ತದೆನ್ನುವುದನ್ನು ರೈತರಿಗೆ ತಿಳಿಸಬೇಕಾಗುತ್ತದೆ. ಈಗಾಗಲೇ ಪೀಕು ಹಾಕುವುದಕ್ಕೆ ಚಾಲು ಮಾಡಿದ್ದಾರೆ. ನೀರಾವರಿ ಪೀಕು ಹಾಕಿದಾಗ ನೀರು ಬರದಿದ್ದಾಗ ನನ್ನ ಕ್ಷೇತ್ರವನ್ನು ಸೇರಿಕೊಂಡು ಐದು ತಾಲ್ಲೂಕಿನ ಜನರಿಗೆ ತೊಂದರೆಯಾಗುತ್ತದೆ. ಅದಕ್ಕೆ ಸರ್ಕಾರ ಇದರ ಬಗ್ಗೆ ಯಾವ ರೀತಿ ಕೆಲಸವನ್ನು ಜರುಗಿಸುತ್ತದೆ ಎಂದು ಕೇಳುತ್ತಾ, ಯದ್ಧೋಪಾದಿಯಲ್ಲಿ ಕೆಲಸವನ್ನು ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ : ಆ ಬಗ್ಗೆ ನಾಳೆ ಅಥವಾ ನಾಡಿದ್ದರಲ್ಲಿ ಮಾಹಿತಿಯನ್ನು ಕೊಡುತ್ತೇನೆ.

ಅಧ್ಯಕ್ಷರು : ಈಗ ಶ್ರೀಮಾನ್ ಪಿ. ರಾಜೀವ್‌ರವರು ಕೇಳಿ.

8. ವಿಷಯ : ಕುಡಚಿ ಮತಕ್ಷೇತ್ರದಲ್ಲಿ ರಾತ್ರಿ ಭಾರೀ ಮಳೆ ಬಿದ್ದು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ ಹಾಗೂ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ಬಗ್ಗೆ.

ಶ್ರೀ ಪಿ. ರಾಜೀವ್ (ಕುಡಚಿ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ತೀರ ಮತಕ್ಷೇತ್ರ ಕುಡಚಿಯಲ್ಲಿ ಮೊನ್ನೆ 5ನೇ ತಾರೀಖು ಮಳೆ ಮತ್ತು ಗಾಳಿಯಿಂದ ಸುಮಾರು 50ಕ್ಕಿಂತ ಹೆಚ್ಚು ವಿದ್ಯುತ್ ಕಂಬಗಳು ಬಿದ್ದಿವೆ. 20ಕ್ಕಿಂತ ಹೆಚ್ಚು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿವೆ. ಸುಮಾರು 30 ರಿಂದ 40 ಮನೆಗಳು ಮತ್ತು ಪೌಲ್ಟ್ರಿ ಫಾರಂಗಳು ಕುಸುದು ಬಿದ್ದಿವೆ. ಇದುವರೆಗೆ ಇದರ ಬಗ್ಗೆ ಯಾವುದೇ ರೀತಿಯ ಪರಿಹಾರ ಕ್ರಮವನ್ನು ಕೈಗೊಂಡಿಲ್ಲ. ಲೈಟ್ ಕಂಬಗಳು ಕೂಡ ಬಂದಿವೆ ಇನ್ನೊಂದು ಬಹಳ ದೊಡ್ಡ ಸಮಸ್ಯೆ ಎಂದರೆ ವಿದ್ಯುತ್ ಸಂಪರ್ಕ ಯಾವಾಗ ಆಗಿದೆ ಅಲ್ಲಿಂದ ಇಲ್ಲಿಯವರೆಗೆ conductor ಗಳನ್ನು ಬದಲಿಸಿಲ್ಲ. ರಾತ್ರಿ ರೈತರು ಕೆಲಸಕ್ಕೆ ಹೋದಾಗ ವೈರುಗಳು ಹರಿದು ಬಿದ್ದಿರುತ್ತವೆ. ಪ್ರತಿವರ್ಷ

ಸರಾಸರಿ 10 ರಿಂದ 15 ಜನ ರೈತರು ವಿದ್ಯುತ್ ತಂತಿ ತಗುಲಿ ಸಾವನ್ನಪ್ಪುತ್ತಿದ್ದಾರೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಯವರು ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ ಜಿಲ್ಲೆಯ ಕುಡಚಿ ಮತಕ್ಷೇತ್ರದಲ್ಲಿ ದಿನಾಂಕ : 05–06–2013ರ ರಾತ್ರಿ ಭಾರಿ ಗಾಳಿ, ಮಳೆ ಬಿದ್ದಿದ್ದರಿಂದ 52 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ ಮತ್ತು 23 ಟ್ರಾನ್ಸ್ ಫಾರಂಗಳು ಸುಟ್ಟು ಹೋಗಿರುತ್ತವೆ. ಇದರ ಒಟ್ಟು ಅಂದಾಜು ನಷ್ಟ ರೂ. 19.50 ಲಕ್ಷ ಆಗಿರುತ್ತದೆ. ಇದುವರೆಗೂ 21 ಕಂಬಗಳನ್ನು ಹಾಗೂ 2 ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲಾಗಿದೆ. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಕಂಬಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳು ಸಾಕಷ್ಟು ದಾಸ್ತಾನು ಇದ್ದು ಮುರಿದು ಬಿದ್ದ ಕಂಬಗಳನ್ನು ಮತ್ತು ಸುಟ್ಟು ಹೋದ ಟ್ರಾನ್ಸ್‌ಫಾರ್ಮರ್‌ಗಳನ್ನು ಕೂಡಲೇ ಬದಲಾಯಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕುಡಚಿ ಮತಕ್ಷೇತ್ರದಲ್ಲಿ ಬರುವ ಎಲ್ಲಾ ಹಳ್ಳಿಗಳಿಗೆ ದಿನಾಂಕ : 06–06–2013 ಸಾಯಂಕಾಲ 4–00 ಗಂಟೆಯ ಸುಮಾರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಹೆಚ್ಚಿನ ಸಂಖ್ಯೆಯ ನೀರಾವರಿ ಪಂಪ್‌ಸೆಟ್ಟುಗಳಿಗೆ ದಿನಾಂಕ : 07–06–2013 ಒಳಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ವಿಫಲವಾದ ನೀರಾವರಿ ಪಂಪ್‌ಸೆಟ್ಟುಗಳ ಟ್ರಾನ್ಸ್‌ಫಾರ್ಮರ್‌ಗಳನ್ನು 72 ಗಂಟೆಯೊಳಗೆ ಬದಲಾಯಿಸಲೂ ಸಹ ಕ್ರಮ ಕೈಗೊಳ್ಳಲಾಗುತ್ತಿದೆ. ಮುಂದುವರೆದಂತೆ ವಿದ್ಯುತ್ ಕಂಬಗಳಾಗಲೀ, ವಿದ್ಯುತ್ ತಂತಿಗಳಾಗಲೀ ಬಿದ್ದು ಯಾವುದೇ ಮನೆಗಳಿಗೆ ಅಥವಾ ಕೋಳಿ ಫಾರಂಗಳಿಗೆ ಹಾನಿಯಾಗಿರುವುದಿಲ್ಲ.

ಈ ತರಹದ ಪರಿಸ್ಥಿತಿಯಲ್ಲಿ ಕೆಲಸಗಳನ್ನು ತೀವ್ರವಾಗಿ ಕೈಗೆತ್ತಿಕೊಳ್ಳುಲು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಬರುವ ಜಿಲ್ಲಾ ಹಾಗೂ ವೃತ್ತ ಮಟ್ಟದಲ್ಲಿ ಅಧೀಕ್ಷಕ ಅಭಿಯಂತರರು ಮತ್ತು ಕಾರ್ಯಪಾಲಕ ಅಭಿಯಂತರರುಗಳ ನೇತೃತ್ವದಲ್ಲಿ "ವಿಪತ್ತು ನಿರ್ವಹಣಾ ತಂಡ" ಗಳನ್ನು ನೇಮಿಸಲಾಗಿದ್ದು, ಇಂತಹ ಸಂದರ್ಭಗಳಲ್ಲಿ ತುರ್ತು ಅಗತ್ಯ ಕ್ರಮ ಕೈಗೊಳ್ಳಲು ಅವರುಗಳಿಗೆ ಅಧಿಕಾರ ನೀಡಲಾಗಿದೆ.

ಅಧ್ಯಕ್ಷರು : ಈಗ ಎಂ.ಟಿ. ಕೃಷ್ಣಪ್ಪ ನವರೇ ಕೇಳಿ.